**OS: 71/2018**
**P.W-1**

<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ</u>

ದಿನಾಂಕಃ 01.02.2024 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರಿಂದಃ</u>

ದಾವಾ ಐಟಂ 4 ರ ಆಸ್ತಿಯ ಯಾರ ಹೆಸರಲ್ಲಿದೆ ಎಂದು ತೋರಿಸಲು ಯಾವುದೇ ದಾಖಲೆ ಹಾಕಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ಸಿದ್ದಪ್ಪ ನಾಗಪ್ಪ ಎಂಬ ಹೆಸರಿನಲ್ಲಿ ದಾಖಲೆ ಇದೆ ಎಂದು ಕೊಟ್ಟಿದ್ದೇವೆ. ಈ ಸಂಬಂದ ದಾಖಲೆ ಹಾಕಿಲ್ಲ ಎಂದರೆ ಸರಿಯಲ್ಲ. ನಿಪಿ 4 ರ ದಾಖಲೆ ನೊಂದಣಿ ಆಗಿಲ್ಲ ಎಂದರೆ ಸರಿ. ಸದರಿ ಆಸ್ತಿಗೆ ಸಿದ್ದಲಿಂಗನಗೌಡ, ಬಸವನಗೌಡ, ಚಂದ್ರೆಗೌಡು ಮಾಲೀಕರು ಎಂದರೆ ಸರಿ. ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ದಾವಾ ಐಟಂ 6 ರ ಆಸ್ತಿಯ ನಿಪಿ 6 ರಂತೆ ಕರಾರು ಪತ್ರ ಹಾಕಿದ್ದೇನೆ ಎಂದರೆ ಸರಿ. ಸದರಿ ಆಸ್ತಿ ಬಿ ಎಂ ಭಾಗ್ಯಮ್ಮ ಕೋಂ ಬಿಜಿ ಮರಳುಸಿದ್ದಯ್ಯ ಹೆಸರಲ್ಲಿದೆ ಎಂದರೆ ಸರಿಯಲ್ಲ. ಅದು ಡಿ ಲೀಲಾವತಿ ಕೋಂ ಸಿದಪ್ಪ ಎಂಬ ಹೆಸರಲ್ಲಿದೆ ಎಂದು ಹೇಳುತ್ತಾರೆ. ಈ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ದಾವೆ ಬಗ್ಗೆ ನನ್ನ ಗಂಡನಿಗೆ ಹೊರೆತು ನನಗೆ ಏನು ಮಾಹಿತಿ ಇಲ್ಲ ಎಂದರೆ ಸರಿ. ನಿವೇಶನ ನಂ.175 ದಾವಣೆಗೆರೆ ಇದೆ ಎಂದರೆ ಸರಿ. ಆ ಆಸ್ತಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ದಾವಾ ಐಟಂ 6 ಆಸ್ತಿ ನಮಗೆ ಪಿತಾರ್ಜಿತವಾಗಿ ಬಂದ ಆಸ್ತಿ ಅಲ್ಲ ಎಂದರೆ ಸರಿ. ಮತ್ತು ಒಟ್ಟು ಕಟುಂಬ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ದಾವಾ ಐಟಂ 6 ರ ಆಸ್ತಿ ಡಿ ಲೀಲಾವತಿ ರವರು ದಿ 26.6.2002 ರಂದು ರೂ.2,08,000 ಗಳಿಗೆ ನೊಂದಾಯಿತ ಕ್ರಯ ಪತ್ರ ಮೂಲಕ ಕ್ರಯ ಪಡೆದಿದ್ದಾರೆ ಎಂದರೆ ಸರಿ. ಸದರಿಯವರು ಖರೀದಿ ಮಾಡಿದ್ದರಿಂದ ಅವರೆ ಮಾಲೀಕರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ದಾವಾ ಐಟಂ 5 ರ ಆಸ್ತಿ ನನ್ನ ಮೈದುನಾ ದಿ 2.7.2018 ರಂದು ರೂ.2,92,000 ಗಳಿಗೆ ಮಲ್ಲೇಶಿ ಹುಲ್ಲಮನಿ ನೊಂದಾಯಿತ ಕ್ರಯ ಪತ್ರ ಮೂಲಕ ಕ್ರಯ ಪಡೆದಿದ್ದಾರೆ ಎಂದರೆ ಸರಿ. ಪ್ರತಿವಾದಿ 1 ಶಿಕ್ಷಕರಾಗಿದ್ದು ಅವರು ಕೆ ಜಿ ಐ ಡಿ ಇಂದ ಸಾಲ ಪಡೆದು ಸದರಿ ಆಸ್ತಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ಪ್ರತಿವಾದಿ 1 ಕೂಡಿ ಖರೀದಿಸಿದ್ದಕ್ಕೆ ದಾಖಲೆಗಳನ್ನು ಹಾಕಿದ್ದೇನೆ. ಈ ಸಂಬಂದ ಯಾವುದೇ ದಾಖಲೆ ಹಾಕಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ 3 ರ ಆಸ್ತಿ

ವಿಸ್ತೀರ್ಣದ ಎಂದು ದಾಖಲೆ ಹಾಕಿಲ್ಲ ಎಂದರೆ ಸರಿಯಲ್ಲ. ದಾವದ 4 ನೇ ಪ್ಯಾರಾದಲ್ಲಿ ದಾವಾ ಆಸ್ತಿಗಳು ನಮ್ಮ ಮಾವನ ಆಸ್ತಿಗಳು ಎಂದು ಹೇಳಿದ್ದೇನೆ ಎಂದರೆ ಸರಿ. ಇದಕ್ಕೆ ಸಂಬಂದಿಸಿದಂತೆ ಯಾವುದೇ ದಾಖಲೆ ಹಾಕಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ಪ್ರತಿವಾದಿ 1 ದಿ 10.7.2009 ರಂದು ವಿಭಾಗ ಆಗಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪತ್ರದ ಎಲ್ಲಾ ಅಂಶ ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಅಲ್ಲದ ಕಾರಣ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

(ಮರು ವಿಚಾರಣೆಃ ಇಲ್ಲ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

ಓ,ಹೇ,ಕೇ,ಸರಿ ಇದೆ,

ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ
ಕೂಡ್ಲಿಗಿ.